**ಕರ್ನಾಟಕ ಸರ್ಕಾರ**

**ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು**

B.Sc(N),B.P.T.&B.Sc.AHS ಕೋರ್ಸಗಳ ಕೋರ್ಸಗಳ ಪ್ರವೇಶಕ್ಕಾಗಿ ಇಚ್ಛೆ/ಆಯ್ಕೆ ದಾಖಲಿಸಲು/ಸೀಟು ಹಂಚಿಕೆ ಸೂಚನೆಗಳು

ಆನ್‌ಲೈನ್ ಸೀಟು ಹಂಚಿಕೆಗೆ ಸಂಬಂಧಿಸಿದ ವಿವರವಾದ ಸೂಚನೆಗಳು ಮತ್ತು ಮಾರ್ಗಸೂಚಿಗಳು

**ಅಭ್ಯರ್ಥಿಗಳು ತಮ್ಮ ಇಚ್ಛೆಗಳನ್ನು (Options) ನಮೂದಿಸುವುದು**

B.Sc(N),B.P.T.&B.Sc.AHS ಕೋರ್ಸಗಳ ಪ್ರವೇಶಕ್ಕಾಗಿ ಆನ್‌ಲೈನ್ ಸೀಟು ಹಂಚಿಕೆಯನ್ನು ಎರಡು ಸುತ್ತಿನಲ್ಲಿ ನಡೆಸಲಾಗುವುದು. 2019ನೇ ಸಾಲಿನಲ್ಲಿ ಸರ್ಕಾರವು ನಿಗದಿ ಪಡಿಸಿರುವ ಸೀಟ್ ಮ್ಯಾಟ್ರಿಕ್ಸ್ ಅನ್ನು ಅಳವಡಿಸಿಕೊಂಡು. ಅಭ್ಯರ್ಥಿಗಳ ಮೆರಿಟ್, ಮೀಸಲಾತಿ ಮತ್ತು ಅಭ್ಯರ್ಥಿಗಳ ಆನ್‌ಲೈನ್ ಮೂಲಕ ದಾಖಲಿಸುವ ಆಪ್ಷನ್‌ಗಳ ಆಧಾರದ ಮೇಲೆ ಸೀಟು ಹಂಚಿಕೆ ಮಾಡಲಾಗುವುದು.

- ಆನ್‌ಲೈನ್ ಸೀಟು ಹಂಚಿಕೆ ಪ್ರಕ್ರಿಯೆಗೆ ಸಂಬಂಧಿಸಿದಂತೆ; ನಿಮ್ಮ ಇಚ್ಛೆಗಳನ್ನು ಆದ್ಯತಾ ಕ್ರಮದಲ್ಲಿ ನಮೂದಿಸುವುದಕ್ಕೆ ಹಂಚಿಕೆಯಾದ ಸೀಟನ್ನು ಪಡೆದುಕೊಳ್ಳುವುದಕ್ಕೆ ಮತ್ತು ಅಂತಿಮವಾಗಿ ನೀವು ಇಚ್ಛಿಸಿರುವ ಕಾಲೇಜಿಗೆ ಸೇರಿಕೊಳ್ಳುವುದಕ್ಕೆ ಹಾಗೂ ಸೂಕ್ತ ಮಾರ್ಗದರ್ಶನ ಪಡೆದುಕೊಳ್ಳುವುದಕ್ಕೆ ಸೂಚನೆಗಳು ಮತ್ತು ಮಾರ್ಗಸೂಚಿಗಳನ್ನು ಚೆನ್ನಾಗಿ ಓದಿ ಮನನ ಮಾಡಿಕೊಳ್ಳುವಂತೆ ನಿಮಗೆ ಸಲಹೆ ನೀಡುತ್ತೇವೆ ಹೆಚ್ಚಿನ ಮಾಹಿತಿಗಾಗಿ ನೀವು dmekarnataka2019@gmail ಗೆ ಇ–ಮೇಲ್ ಮಾಡುವ ಮೂಲಕವಾಗಲೀ ಅಥವಾ ವೆಬ್‌ಸೈಟ್ http:/kea.kar.nic.in ಮೂಲಕವಾಗಲೀ ನಮ್ಮನ್ನು ಸಂಪರ್ಕಿಸಬಹುದಾಗಿದೆ.
- ಎಲ್ಲ ಅಭ್ಯರ್ಥಿಗಳು ಈ ಮುಂದಿನ ಸೂಚನೆಗಳನ್ನು ಎಚ್ಚರಿಕೆಯಿಂದ ಓದಿಕೊಳ್ಳವಂತೆ ಮತ್ತು ನಿಮ್ಮ ಇಚ್ಛೆಗಳನ್ನು ನಮೂದಿಸುವುದಕ್ಕೆ ಮೊದಲು ಇಡೀ ಪ್ರಕ್ರಿಯೆಯನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವಂತೆ ಸೂಚಿಸಲಾಗಿದೆ.
- ಅಭ್ಯರ್ಥಿಗಳು ಸರಿಯಾದ ಆಯ್ಕೆಗಳನ್ನು ಮಾಡಿಕೊಳ್ಳುವುದು ಅಗತ್ಯವಾಗಿದೆ ಇದರಿಂದ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಸಾಧ್ಯವಾಗುತ್ತದೆ. ಆನ್‌ಲೈನ್ ಕೌನ್ಸಲಿಂಗ್ ಅನ್ನು ಸುಗಮವಾಗಿ ನಿರ್ವಹಿಸುವುದಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಪ್ರಮುಖವಾದ ಮತ್ತು ಸುಸಂಗತವಾದ ಮಾಹಿತಿಯನ್ನು ಕ.ಪ.ಪ್ರಾ ಜಾಲತಾಣದಲ್ಲಿ ಪ್ರಕಟಿಸುತ್ತವೆ.
- ಕಾಲಕಾಲಕ್ಕೆ ಅಪ್‌ಡೇಟ್ ಮಾಡಿದಂತ ಎಲ್ಲಾ ಮಾಹಿತಿಯ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ http:/kea.kar.nic.in ನಲ್ಲಿ ಪ್ರಕಟಿಸಲಾಗುತ್ತದೆ.
- ಪ್ರತಿಯೊಬ್ಬ ಅಭ್ಯರ್ಥಿ ಮತ್ತು ಆತನ/ಆಕೆಯ ತಂದೆ–ತಾಯಿ/ಪೋಷಕರು ತಾವು ನಿರ್ವಹಿಸಬೇಕಾಗಿರುವ ಪಾತ್ರ ಮತ್ತು ಹೊಣೆಗಾರಿಕೆಯನ್ನು ಕುರಿತು ಚೆನ್ನಾಗಿ ಓದಿ ಮನನ ಮಾಡಿಕೊಳ್ಳುವಂತೆ ಸಲಹೆ ನೀಡಲಾಗಿದೆ. ಅಭ್ಯರ್ಥಿಗಳು ಮತ್ತು ಅವರ ತಂದೆ–ತಾಯಿ/ಪೋಷಕರು ಈ ಮಾಹಿತಿ ಪುಸ್ತಕವನ್ನು ಎಚ್ಚರಿಕೆಯಿಂದ ಓದದೇ ಇರುವುದರಿಂದ ಮತ್ತು ಅದರಲ್ಲಿ ಸೂಚಿಸಿರುವಂತೆ ತಮ್ಮ ಪಾತ್ರ ಮತ್ತು ಹೊಣೆಗಾರಿಕೆಗಳನ್ನು ನಿರ್ವಹಿಸದಿರುವುದರಿಂದ ಹಾಗೂ ಕಾಲಕಾಲಕ್ಕೆ ಪತ್ರಿಕಾ ಪ್ರಕಟಣೆಗಳು, ವೆಬ್‌ಸೈಟ್ ಅಧಿಸೂಚನೆಗಳು/ಹೊರಡಿಸುವ ವೇಳಾಪಟ್ಟಿಯನ್ನು ಅನುಸರಿಸದಿರುವುದರಿಂದ ಉಂಟಾಗಬಹುದಾದ ಯಾವುದೇ ತೊಂದರೆಗಳಿಗೆ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಹೊಣೆಯಾಗುವುದಿಲ್ಲ.
- ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆಯು ಯಶಸ್ವಿಯಾಗಿ ಮುಗಿದ ನಂತರ ಅಲ್ಲಿಂದ ಹೊರಡುವುದಕ್ಕೆ ಮುಂಚೆ ತಮ್ಮೊಂದಿಗೆ ಈ ಮುಂದಿನ ದಾಖಲೆಗಳನ್ನು ಕಡ್ಡಾಯವಾಗಿ ಹೊಂದಿರುವುದನ್ನು ಖಚಿತಪಡಿಸಿಕೊಳ್ಳಬೇಕು.
- ಪರಿಶೀಲನಾ ಚೀಟಿ (VERIFICATION SLIP) ತಮ್ಮ ದಾಖಲೆಗಳ ಪರಿಶೀಲನೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿಕೊಂಡ ಪ್ರತಿಯೊಬ್ಬ ಅಭ್ಯರ್ಥಿಗೂ ಒಂದು ಪರಿಶೀಲನಾ ಚೀಟಿಯನ್ನು ನೀಡಲಾಗುವುದು. ಅದರ ಮೇಲೆ ಮುದ್ರಿತವಾಗಿರುವ ಎಲ್ಲಾ ವಿವರಗಳು ಸರಿಯಾಗಿದೆಯೇ ಎನ್ನುವುದನ್ನು ಪರಿಶೀಲಿಸಿಕೊಳ್ಳುವಂತೆ ಈಗಾಗಲೇ ಸೂಚಿಸಲಾಗಿದೆ ಮತ್ತು ಅದರಲ್ಲಿ ಯಾವುದೇ/ತಪ್ಪು/ಸರಿ ಇಲ್ಲದ ನಮೂದುಗಳು ಇದ್ದ ಪಕ್ಷದಲ್ಲಿ ಆ ವಿಷಯವನ್ನು

ಕೂಡಲೇ ಅಂದರೆ ಆ ಪರಿಶೀಲನಾ ಚೀಟಿಗೆ ನಿಮ್ಮ ಸಹಿ ಹಾಕುವುದಕ್ಕೆ ಮೊದಲು ಪರಿಶೀಲನಾಧಿಕಾರಿ ಗಮನಕ್ಕೆ ತರುವಂತೆ ಈಗಾಗಲೇ ಸೂಚಿಸಲಾಗಿದೆ. ಏಕೆಂದರೆ ಪರಿಶೀಲನಾ ಪ್ರಕ್ರಿಯೆ ಪೂರ್ಣಗೊಂಡ ನಂತರ ಯಾವುದೇ ಬದಲಾವಣೆಗಳಿಗೆ ಅವಕಾಶ ನೀಡಲಾಗುವುದಿಲ್ಲ.

- ರಹಸ್ಯ ಸಂಕೇತಾಕ್ಷರ (SECRET KEY) : ರಹಸ್ಯ ಸಂಕೇತಾಕ್ಷರವು, ಎಂಟು ಅಕ್ಷರ ಮತ್ತು ಸಂಖ್ಯೆಗಳಿಂದ ಕೂಡಿರುವ ಒಂದು ಲಿಪಿ ರೂಪವಾಗಿರುತ್ತದೆ (Eight alphanumeric characters) ಇದನ್ನು ಪರಿಶೀಲನಾ ಚೀಟಿಯಲ್ಲಿ ಮುಂದ್ರಿಸಲಾಗಿರುತ್ತದೆ ಈ ರಹಸ್ಯ ಸಂಕೇತಾಶ್ವರವು, ಪ್ರತಿಯೊಬ್ಬ ಅಭ್ಯರ್ಥಿಗೂ ಬೇರೆ ಬೇರೆಯಾಗಿರುವಂಥ ವಿಶಿಷ್ಟ ರೀತಿಯದ್ದಾಗಿರುತ್ತದೆ. ನೀವು ಇದನ್ನು ಗೌಪ್ಯವಾಗಿ ಇಟ್ಟುಕೊಳ್ಳಬೇಕಿರುತ್ತದೆ ಮತ್ತು ಇದನ್ನು ನೀವು, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಇಚ್ಛೆ ನಮೂದು ಮಾಡುವುದಕ್ಕೆ ಲಾಗ್ ಇನ್ ಆಗುವುದಕ್ಕಾಗಿ ಬಳಸಬೇಕಿರುತ್ತದೆ.
- ದಯವಿಟ್ಟು ಅಧಿಸೂಚನೆಯಲ್ಲಿ ಸೂಚಿಸಲಾದಂತೆ ಯುಆರ್‌ಎಲ್ ಅಥವಾ ವೆಬ್ ಸೈಟ್ http:/kea.kar.nic.in ನಮೂದಿಸಿ ಯುಆರ್‌ಎಲ್‌ಅನ್ನು ನಮೂದಿಸಿದ ನಂತರ ನಿಮಗೆ "B.Sc(N), B.P.T. & B.Sc.AHS-2019 option entry " ಎನ್ನುವ ಲಿಂಕ್ ಕಂಡುಬರುತ್ತದೆ. ಸಂಬಂಧಿಸಿದ ಹಲವಾರು ವಿಷಯಗಳಿಗೆ ಮಾಹಿತಿ ಪಡೆದುಕೊಳ್ಳುವುದಕ್ಕಾಗಿ, ನೀವು ಈ ಲಿಂಕ್ ಅನ್ನು ಆಯ್ಕೆ ಮಾಡಿಕೊಳ್ಳಿ

**ಅಭ್ಯರ್ಥಿಯು ತನ್ನ ಆದ್ಯತೆಯ ಇಚ್ಛೆಗಳನ್ನು (OPTIONS) ಯಾವಾಗ ನಮೂದಿಸಬಹುದು?**

ಸರ್ಕಾರದ ಸೀಟ್ ಮ್ಯಾಟ್ರಿಕ್ಸ್ ಪ್ರಕಟಿಸಿದ ನಂತರ ಅಭ್ಯರ್ಥಿಗಳು ತಮ್ಮ ಇಚ್ಛೆಗಳನ್ನು ನಮೂದಿಸುವುದು ಪ್ರಾರಂಭವಾಗುತ್ತದೆ. ಹಂಚಿಕೆಗೆ ಲಭ್ಯವಿರುವ ಸೀಟುಗಳ ಕಾಲೇಜುವಾರು ಕೋರ್ಸ್‌ವಾರು ಮತ್ತು ಪ್ರವರ್ಗವಾರು ಸೀಟುಗಳ ವಿವರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ http:/kea.kar.nic.in ನಲ್ಲಿ ಪ್ರಕಟಿಸಲಾಗುವುದು. ಇದನ್ನು ಅಭ್ಯರ್ಥಿಗಳು ಡೌನ್‌ಲೋಡ್ ಮಾಡಿಕೊಂಡು, ಮುದ್ರಿತ ಪ್ರತಿಯನ್ನು ತೆಗೆದು ಕೊಳ್ಳಬಹುದು.

ಇಚ್ಛೆಯನ್ನು ನಮೂದಿಸುವುದಕ್ಕೆ ನಿಗದಿಪಡಿಸಿದ ಸಮಯ ಹಾಗೂ ಕೊನೆಯ ದಿನಾಂಕದ ಒಳಗಾಗಿ ಅವರು ತಮ್ಮ ಇಚ್ಛೆಗಳನ್ನು ನಮೂದಿಸಬೇಕು. ಇಚ್ಛೆಯನ್ನು ನಮೂದಿಸುವುದಕ್ಕಾಗಿ ನಿಗದಿಪಡಿಸಿದ ವೇಳಾಪಟ್ಟಿ ಗೊತ್ತಾಗಲಿಲ್ಲ: ಆದ್ದರಿಂದ ನಿಗದಿಪಡಿಸಿದ ಸಮಯ ಮತ್ತು ದಿನಾಂಕದ ಒಳಗೆ ತನ್ನ ಇಚ್ಛೆಗಳನ್ನು ನಮೂದಿಸಲು ಆಗಲಿಲ್ಲ: ಹಾಗಾಗಿ ಇಚ್ಛೆಗಳನ್ನು ನಮೂದಿಸುವುದಕ್ಕಾಗಿ ತಮಗೆ ಅವಕಾಶ ನೀಡಬೇಕು ಎಂದು ಯಾರೇ ಅಭ್ಯರ್ಥಿಗಳು ಕೋರಿದರೆ, ಅದಕ್ಕೆ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಅವಕಾಶ ನೀಡುವುದಿಲ್ಲ ಮತ್ತು ಇದಕ್ಕಾಗಿ ಅದು ಯಾವುದೇ ಹೊಣೆ ಹೊತ್ತುಕೊಳ್ಳುವುದಿಲ್ಲ. ಆದ್ದರಿಂದ ಅಭ್ಯರ್ಥಿಗಳು ಕೊನೆ ಕ್ಷಣ ಮತ್ತು ದಿನಾಂಕದವರೆಗೆ ಕಾಯದೆ, ನಿರ್ದಿಷ್ಟಪಡಿಸಿದ ಕೊನೆಯ ದಿನಾಂಕ ಮತ್ತು ಸಮಯಕ್ಕಿಂತ ಸಾಕಷ್ಟು ಮುಂಚಿತವಾಗಿಯೇ, ತಮ್ಮ ಇಚ್ಛೆಗಳನ್ನು ನಮೂದಿಸುವುದು ಅತ್ಯಂತ ಸೂಕ್ತವೆಂದು ಸಲಹೆ ನೀಡಲಾಗಿದೆ. ಯಾರೇ ಅಭ್ಯರ್ಥಿ ಯಾವುದೇ ಕಾರಣದಿಂದ ತನ್ನ ಇಚ್ಛೆಗಳನ್ನು ನಮೂದಿಸುವುದಕ್ಕೆ ವಿಫಲನಾದರೆ, ಅದಕ್ಕೆ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಹೊಣೆಯಾಗುವುದಿಲ್ಲ.

**ಇಚ್ಛೆ (OPTIONS) ಗಳನ್ನು ಎಷ್ಟು ಬೇಕಾದರೂ ನಮೂದಿಸಬಹುದು ಅದಕ್ಕೆ ಯಾವುದೇ ಸಂಖ್ಯಾಮಿತಿ ಇರುವುದಿಲ್ಲ.** ಒಬ್ಬ ಅಭ್ಯರ್ಥಿ ತನ್ನ ಸ್ವಂತ ಆದ್ಯತೆಗೆ ಅನುಗುಣವಾಗಿ ತಾನು ಬಯಸುವಷ್ಟು ಸಂಖ್ಯೆಯ ಇಚ್ಛೆಗಳನ್ನು ನಮೂದಿಸಬಹುದು. ಸೀಟು ಸಿಗದಿದ್ದ ಪಕ್ಷದಲ್ಲಿ ಉಂಟಾಗುವ ನಿರಾಸೆಯನ್ನು ತಪ್ಪಿಸುವ ದೃಷ್ಟಿಯಿಂದ, ಅಭ್ಯರ್ಥಿಗಳು ಇಚ್ಛೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನಮೂದಿಸುವಂತೆ ಸಲಹೆ ನೀಡಲಾಗಿದೆ. ಅಭ್ಯರ್ಥಿಗಳು ತಾವು ಇಷ್ಟಪಡುವ ಕಾಲೇಜು, ಆಸಕ್ತಿ ಹೊಂದಿರುವ ಕೋರ್ಸ್ ಮೊದಲಾದವುಗಳಿಗೆ ಸಂಬಂಧಿಸಿದಂತೆ ಮನೆಯಲ್ಲಿ ಪೂರ್ವಾಭ್ಯಾಸ ಮಾಡುವಂತೆ ಸಲಹೆ ನೀಡಲಾಗಿದೆ. ತಮ್ಮ ಇಚ್ಛೆಗಳನ್ನು ಕಂಪ್ಯೂಟರ್‌ನಲ್ಲಿ ನಮೂದಿಸುವುದಕ್ಕೆ ಮೊದಲು ಅವುಗಳಲ್ಲಿ ಯಾವುವು ತಮಗೆ ಹೆಚ್ಚು ಇಷ್ಟವಾದ ಇಚ್ಛೆಗಳಾಗಿರುತ್ತವೋ

ಅವುಗಳನ್ನು, ಒಂದರನಂತರ ಇನ್ನೊಂದರಂತೆ ಒಂದು ಬಿಳಿಯ ಹಾಳೆಯ ಮೇಲೆ ಬರೆದುಕೊಳ್ಳಬೇಕು ಮತ್ತು ತಮ್ಮ ಇಚ್ಚೆಗಳನ್ನು ಕುರಿತು ತಮ್ಮ ತಂದೆ–ತಾಯಿಗಳು / ಪೋಷಕರು / ಹಿತೈಷಿಗಳೊಂದಿಗೆ ಚರ್ಚಿಸಬೇಕು (ಅಭ್ಯರ್ಥಿಗಳು ತಮ್ಮ ಇಚ್ಚೆಗಳನ್ನು ಅಂತಿಮಗೊಳಿಸುವುದಕ್ಕೆ ಸಂಬಂಧಿಸಿದಂತೆ ಕಡ್ಡಾಯವಾಗಿ ಅವರ ತಂದೆ–ತಾಯಿಯರೊಂದಿಗೆ ಸಮಾಲೋಚಿಸುವಂತೆ ಮತ್ತು ಅವರ ಸಲಹೆಯನ್ನು ಪಡೆಯುವಂತೆ ಸೂಚಿಸಲಾಗಿದೆ) ನಿಮಗಿರುವ ಆಸಕ್ತಿ, ಕಾಲೇಜು ಹೊಂದಿರುವ ಮೂಲಸೌಕರ್ಯಗಳು ಮತ್ತು ಕೋರ್ಸುಗಳು, ಅದು ನೀವು ಇರುವ ಸ್ಥಳದಿಂದ ಎಷ್ಟು ದೂರದಲ್ಲಿ ಎನ್ನುವ ವಿಚಾರ, ವಿದ್ಯಾರ್ಥಿನಿಲಯದಲ್ಲಿ ಸೀಟು ದೊರೆಯುವಿಕೆ ಇದೇ ಮೊದಲಾದವುಗಳು ನಿಮ್ಮ ಇಚ್ಚೆಗಳನ್ನು ಆನ್‌ಲೈನ್‌ನಲ್ಲಿ ನಮೂದಿಸುವಾಗ ಪ್ರಭಾವ ಬೀರುವ ಕೆಲವು ಮುಖ್ಯ ಸಂಗತಿಗಳಾಗಬಹುದು. ನೀವು ಈ ಎಲ್ಲಾ ಪೂರ್ವಭಾವಿ ಪ್ರಯತ್ನಗಳನ್ನು ಮಾಡುವುದರಿಂದ ಆನ್‌ಲೈನ್‌ನಲ್ಲಿ ಇಚ್ಚೆಗಳನ್ನು ನಮೂದಿಸುವ ಸಮಯದಲ್ಲಿ ನಿಮ್ಮ ಸಮಯ ಉಳಿಯುತ್ತವೆ ಮತ್ತು ನೀವು ತಪ್ಪು ಮಾಡುವ ಸಾಧ್ಯತೆಗಳು ಕಡಿಮೆಯಾಗುತ್ತದೆ. ಇಚ್ಚೆಗಳನ್ನು ನಮೂದಿಸಿದ ನಂತರ ಅಭ್ಯರ್ಥಿಗಳು ಸಬ್‌ಮಿಟ್(SUBMIT) ಬಟನ್ ಅನ್ನು ಒತ್ತಬೇಕು ಮತ್ತು ತಪ್ಪದೆ ಲಾಗ್‌ಔಟ್ ಆಗಬೇಕು.

**ಪ್ರತಿಯೊಂದು ಸುತ್ತಿನಲ್ಲಿ ಗೊತ್ತುಪಡಿಸಿರುವ ಕೊನೆಯ ದಿನಾಂಕ ಮತ್ತು ಸಮಯದಂದು ಸರ್ವರ್‌ನಲ್ಲಿ ದಾಖಲಾಗಿರುವ ಇಚ್ಚೆಗಳು ಸ್ಥಿರವಾಗಿ ಉಳಿಯುತ್ತವೆ. ಹೀಗೆ ಸ್ಥಿರವಾಗಿ ಉಳಿದ ಇಚ್ಚೆಗಳನ್ನು ಮಾತ್ರ ಸೀಟು ಹಂಚಿಕೆಯ ಸಮಯದಲ್ಲಿ ಪರಿಗಣಿಸಲಾಗುವುದು. ಪ್ರತಿಯೊಂದು ಸುತ್ತಿನಲ್ಲಿ ಇಚ್ಚೆಗಳನ್ನು ನಮೂದಿಸುವುದಕ್ಕೆ ಗೊತ್ತುಪಡಿಸಿರುವ ಕೊನೆ ದಿನಾಂಕ ಮತ್ತು ಸಮಯ ಮುಗಿದ ನಂತರ ಅಭ್ಯರ್ಥಿಗಳು, ತಾವು ನಮೂದಿಸಿದ ಇಚ್ಚೆಗಳ ಮುದ್ರಿತ ಪ್ರತಿ (ಪ್ರಿಂಟ್) ತೆಗೆದುಕೊಳ್ಳಲು ಸೂಚಿಸಲಾಗಿದೆ.**

## ಮನೆಯಲ್ಲಿ ಮಾಡಬೇಕಾದ ಪೂರ್ವಸಿದ್ಧತಾ ಕಾರ್ಯ:

ಸೀಟುಗಳ ಹಂಚಿಕೆಯನ್ನು ಸಂಪೂರ್ಣವಾಗಿ ಅಭ್ಯರ್ಥಿಗಳು ನೀಡುವ ಇಚ್ಚೆಗಳ ಆದ್ಯತೆಯ ಮೇಲೆ ಅವರ ಮೆರಿಟ್/ರ‍್ಯಾಂಕ್‌ಗೆ ಅನುಸಾರವಾಗಿ ಮಾಡಲಾಗುತ್ತದೆ, ಆದ್ದರಿಂದ, ಕಂಪ್ಯೂಟರ್ ಬಳಸುವುದನ್ನು, ಸೀಟುಗಳನ್ನು ಲಾಕ್ ಮಾಡುವುದನ್ನು ಕುರಿತು ಅಭ್ಯರ್ಥಿಗಳು ತಾವೇ ಚೆನ್ನಾಗಿ ತಿಳಿದುಕೊಳ್ಳುವುದು ಅತ್ಯಂತ ಮಹತ್ವದ ವಿಚಾರವಾಗಿದೆ ಇದರಿಂದ ಅವರು ತಮ್ಮ ಸರಿಯಾದ ಇಚ್ಚೆ (Options) ಗಳನ್ನು ಮತ್ತು ಆಯ್ಕೆ (Choice) ಗಳನ್ನು ನಮೂದಿಸುವುದಕ್ಕೆ ಸಾಧ್ಯವಾಗುತ್ತದೆ. ಕಂಪ್ಯೂಟರ್ ಬಳಸುವುದರಲ್ಲಿ ನಿಷ್ಣಾತನಾಗಿರುವ ವ್ಯಕ್ತಿಗೂ ಕೂಡ ಸುಮಾರು 100 ಇಚ್ಚೆಗಳನ್ನು ನಮೂದಿಸುದಕ್ಕಾಗಿ ಕನಿಷ್ಠ ಒಂದು ಗಂಟೆ ಕಾಲಾವಕಾಶ ಬೇಕಾಗುತ್ತದೆ. ಆದ್ದರಿಂದ, ತಮ್ಮ ಇಚ್ಚೆಗಳನ್ನು ನಮೂದಿಸುವುದಕ್ಕೆ ಸಂಬಂಧಿಸಿದಂತೆ ಪೂರ್ವಭ್ಯಾಸ ಮಾಡುವುದು ಅತ್ಯಂತ ಅಗತ್ಯವಾಗಿರುತ್ತದೆ. ಕಂಪ್ಯೂಟರನ್ನು ಚೆನ್ನಾಗಿ ಬಳಸುವುದಕ್ಕೆ ಸಂಬಂಧಿಸಿದಂತೆ ಹೊಂದಿರುವ ಜ್ಞಾನ, ಕಾಲೇಜು ಮತ್ತು ಕೋರ್ಸುಗಳಿಗೆ ಸಂಬಂಧಿಸಿದಂತೆ ಸರಿಯಾದ ಮಾಹಿತಿಯನ್ನು ಮೊದಲೇ ಹೊಂದಿರುವುದು, ಇಚ್ಚೆಗಳನ್ನು ತುಂಬುದಕ್ಕೆ ಅತ್ಯಂತ ಅವಶ್ಯಕವಾಗಿ ಬೇಕಾಗಿರುವ ಸಂಗತಿಗಳಾಗಿವೆ. ಇಚ್ಚೆಯನ್ನು ನಮೂದಿಸುವಾಗ ಎಸಗುವ ಒಂದೇ ಒಂದು ಸಣ್ಣ ತಪ್ಪು ಕೂಡ ಅಭ್ಯರ್ಥಿಗಳು ಗಳಿಸುವ ರ‍್ಯಾಂಕ್‌ಗೆ ಅನುಸಾರವಾಗಿ ಅವರು ಇಚ್ಚಿಸುವ ಅತ್ಯಂತ ಅಮೂಲ್ಯವಾದ ಕಾಲೇಜು/ಕೋರ್ಸು ಅವರಿಗೆ ಸಿಗದಂತೆ ಮಾಡಿಬಿಡಬಹುದು. ಆದ್ದರಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಜಾಲತಾಣದಲ್ಲಿ ಇಚ್ಚೆಗಳನ್ನು ತುಂಬುವುದಕ್ಕೆ ಸಂಬಂಧಿಸಿದಂತೆ ಅನುಸರಿಸಬೇಕಿರುವ ಪ್ರಕಟಿಸಿದ ಪ್ರಕ್ರಿಯೆಗಳನ್ನು ಅಭ್ಯರ್ಥಿಗಳು ಸ್ವತ: ಚೆನ್ನಾಗಿ ತಿಳಿದಿಕೊಳ್ಳುವುದು ಅತ್ಯಂತ ಸೂಕ್ತವೆಂದು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಸಲಹೆ ನೀಡುತ್ತದೆ. ಹಂಚಿಕೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಚೆನ್ನಾಗಿ ತಿಳಿವಳಿಕೆ ಬರಬೇಕಾದರೆ, ಅವರು ಮನೆಯಲ್ಲಿ ಪ್ರತಿದಿನ ಕನಿಷ್ಠ ಒಂದು ಗಂಟೆಯಷ್ಟಾದರೂ ಈ ಕುರಿತು ಅಭ್ಯಾಸ ಮಾಡಬೇಕಾಗಿರುತ್ತದೆ. ಅಭ್ಯರ್ಥಿಗಳು ಆನ್‌ಲೈನ್‌ನ ಇಚ್ಚೆ ನಮೂನೆಯಲ್ಲಿ ತಮ್ಮ ಇಚ್ಚೆಗಳನ್ನು ಈ ಕೆಳಗಿನ ಕ್ರಮಗಳನ್ನು ಅನುಸರಿಸಿ ನಮೂದಿಸಬಹುದಾಗಿದೆ.

- ಅಭ್ಯರ್ಥಿಯು ಅಧಿಸೂಚನೆಯಲ್ಲಿ ನೀಡಿರುವ ಕಾಲೇಜಿನ ಹೆಸರು ಮತ್ತು ಕೋರ್ಸುಗಳನ್ನು ಒಂದು ಪ್ರತ್ಯೇಕವಾದ ಹಾಳೆಯಲ್ಲಿ ಬರೆದುಕೊಳ್ಳಬೇಕು.
- ಆಯ್ಕೆ ಮಾಡಿಕೊಂಡು ಕಾಲೇಜುಗಳ ಪೈಕಿ ಇಚ್ಚೆಗಳ ಆದ್ಯತೆಯನ್ನು ಬರೆದಿಟ್ಟಕೊಳ್ಳಬೇಕು.
- ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಹ, ಅಭ್ಯರ್ಥಿಗಳು ತಮ್ಮ ಆಯ್ಕೆಗೆ ಅನುಸಾರವಾಗಿ ಇಚ್ಚೆಗಳನ್ನು ನಮೂದಿಸುವುದನ್ನು ಕುರಿತು ಚೆನ್ನಾಗಿ ಮನವರಿಕೆ ಮಾಡಿಕೊಳ್ಳುವಂತೆ ಮಾಡುವ ದೃಷ್ಟಿಯಿಂದ "ಅವರಿಗೆ ಅಭ್ಯಾಸದ ಕಾರ್ಯಕ್ರಮವನ್ನು ನಡೆಸುತ್ತದೆ ".
- ಮೊದಲನೆ ಸುತ್ತು ನಿಜವಾಗಿ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಅಭ್ಯರ್ಥಿಗಳು ನೀಡಿರುವ ವಾಸ್ತವಿಕವಾದ ಇಚ್ಚೆಗಳ ಮಾಹಿತಿಯನ್ನು ಆಧರಿಸಿ, ಒಂದು ಅಣಕು ಸೀಟು ಹಂಚಿಕೆಯನ್ನು ಸಹ ಮಾಡಲಾಗುವುದು. ಇದರಿಂದ ಅಭ್ಯರ್ಥಿಗಳಿಗೆ

ತಾವು ನೀಡಿರುವ ಇಚ್ಛೆಗಳಿಗೆ ಅನುಸಾರವಾಗಿ ಹೇಗೆ ಕಾಲೇಜು ಮತ್ತು ಕೋರ್ಸನ್ನು ಹಂಚಿಕೆ ಮಾಡಲಾಗುವುದು ಎನ್ನವುದು ಗೊತ್ತಾಗುತ್ತದೆ.

- ಅಣಕು ಹಂಚಿಕೆಯನ್ನು ನೋಡಿದ ನಂತರವೂ ಸಹ, ಅಭ್ಯರ್ಥಿಯು ತನ್ನ ಇಚ್ಛೆಗಳನ್ನು ಬದಲಾಯಿಸಬಹುದಾಗಿದೆ ಇದರಿಂದ ತಾವು ಹೊಂದಿರುವ ಮೆರಿಟ್ ಮತ್ತು ನಮೂದಿಸಿರುವ ಇಚ್ಛೆಗಳಿಗೆ ಅನುಸಾರವಾಗಿ, ತಮಗೆ ಪ್ರಾಯಶ: ಯಾವ ಸೀಟು ದೊರೆಯಬಹುದು ಎನ್ನವುದನ್ನು ಅವರು ಕಂಡುಕೊಳ್ಳುದಕ್ಕೆ ನೆರವಾಗುತ್ತದೆ. ಅಣಕು ಸೀಟು ಹಂಚಿಕೆಯು, ಕೋರ್ಸು ಮತ್ತು ಕಾಲೇಜನ್ನು ಹಂಚಿಕೆ ಮಾಡುವ ಪ್ರಕ್ರಿಯೆಯನ್ನು ಕುರಿತು ಅಭ್ಯರ್ಥಿಗಳಿಗೆ ಪರಿಚಯ ಮಾಡಿಕೊಡಲು ಮತ್ತು ತೋರಿಸಿಕೊಡಲು ಆಯೋಜಿಸುವ ಒಂದು ಅಭ್ಯರ್ಥಿಸ್ನೇಹಿಯಾದ ಕ್ರಮವಾಗಿದೆಯೇ ಹೊರತು, ನಿಜವಾಗಿ ಸೀಟುಗಳನ್ನು ಹಂಚಿಕೆ ಮಾಡುವಾಗ ಅವರಿಗೆ ಅದೇ ಸೀಟು ಮತ್ತು ಕಾಲೇಜನ್ನು ಹಂಚಿಕೆ ಮಾಡಲಾಗುತ್ತದೆ ಎಂದು ಅವರು ಯಾವುದೇ ರೀತಿಯಲ್ಲೂ ಊಹಿಸಿಕೊಳ್ಳಬಾರದು ಏಕೆಂದರೆ, ಈ ಅಣುಕ ಸೀಟು ಹಂಚಿಕೆ ಪ್ರಕ್ರಿಯೆ ನಂತರ ಸಹ ವಿದ್ಯಾರ್ಥಿಗಳು ತಾವು ನಮೂದಿಸಿರುವ ಇಚ್ಛೆಗಳ ಆದ್ಯತೆಯನ್ನು ಬದಲಾಯಿಸಿಕೊಳ್ಳುವ ಅವಕಾಶ ಹೊಂದಿರುತ್ತಾರೆ.
- ನಿಮ್ಮ ಇಚ್ಛೆಗಳನ್ನು ಕಂಪ್ಯೂಟರ್‌ನಲ್ಲಿ ವಾಸ್ತವವಾಗಿ ನಮೂದಿಸುವುದಕ್ಕೆ ಮುಂಚಿತವಾಗಿ ಅವುಗಳನ್ನು ಒಂದು ಬಿಳಿ ಹಾಳೆಯಲ್ಲಿ ಬರೆದುಕೊಂಡು, ಅವುಗಳನ್ನು ಕುರಿತು ನಿಮ್ಮ ತಂದೆ–ತಾಯಿಪೋಷಕರು / ಹಿತೈಷಿಗಳು ಮೊದಲಾದವರೊಂದಿಗೆ ಚರ್ಚಿಸುವುದು ಒಳ್ಳೆಯದು.
- ಅತ್ಯಂತ ಉತ್ಕೃಷ್ಟ ರೀತಿಯಲ್ಲಿ ರೂಪಿಸಲಾಗಿರುವ ತಂತ್ರಾಂಶ ಮತ್ತು ಅತ್ಯಂತ ಸಮರ್ಥವಾದ ಕಂಪ್ಯೂಟರ್‌ಗಳು ಹಂಚಿಕೆಯ ಇಡೀ ಪ್ರಕ್ರಿಯೆಯನ್ನು ನಿಯಂತ್ರಿಸುತ್ತವೆ. ಇವು ಸೀಟು ಹಂಚಿಕೆಗಾಗಿ ಅಭ್ಯರ್ಥಿಗಳು ನೀಡಿರುವ ರ್‍ಯಾಂಕು ಮತ್ತು ನೀಡಿರುವ ಇಚ್ಛೆಗಳಿಗೆ ಅನುಸಾರವಾಗಿ, ಸಾಧ್ಯವಾದಷ್ಟು ಅತ್ಯುತ್ತಮವಾದ ಸೀಟನ್ನು ಅವರಿಗೆ ಹಂಚಿಕೆ ಮಾಡುವುದಕ್ಕೆ ಸಂಬಂಧಿಸಿದಂತೆ ಅವರು ನೀಡಿರುವ ಆಯ್ಕೆಗಳನ್ನು ಅತ್ಯಂತ ಸೂಕ್ಷ್ಮವಾಗಿ ಪರಿಶೀಲಿಸುತ್ತವೆ. ಆದ್ದರಿಂದ ಯಾವ ಕೋರ್ಸು ಮತ್ತು ಕಾಲೇಜು ತನಗೆ ಹೆಚ್ಚು ಇಷ್ಟವಾದುದು ಎನ್ನವುದನ್ನು ಕುರಿತು ಅಭ್ಯರ್ಥಿಗಳು ಅತ್ಯಂತ ಸ್ಪಷ್ಟವಾದ ಕಲ್ಪನೆಯನ್ನು ಹೊಂದಿರುವುದು ಬಹಳ ಮುಖ್ಯವಾದುದಾಗಿದೆ.
- ಅಭ್ಯರ್ಥಿಗಳು ಲಭ್ಯವಿರುವ ಕಾಲೇಜುಗಳು / ಕೋರ್ಸುಗಳು ಲಭ್ಯವಿರುವ ಮೂಲಸೌಕರ್ಯಗಳು ಬೋಧಕ ಸಿಬ್ಬಂದಿ / ಪ್ರಯೊಗಾಲಯ ಸೌಲಭ್ಯಗಳು, ವಿದ್ಯಾರ್ಥಿನಿಲಯ ಸೌಲಭ್ಯಗಳು ಮತ್ತು ತಮ್ಮ ಇಚ್ಛೆಗಳನ್ನು ನಿಖರವಾಗಿ ನೀಡುವುದಕ್ಕೆ ಸಂಬಂಧಿಸಿದಂತೆ ಸಹಾಯಕವಾಗುವಂತಹ ಯಾವುದೇ ಇತರ ಮಾಹಿತಿಯನ್ನು ಸಂಗ್ರಹಿಸಿಕೊಳ್ಳುವಂತೆ ಸಲಹೆ ನೀಡಲಾಗಿದೆ. ಅಭ್ಯರ್ಥಿಗಳ ಮನೆಯಿಂದ ಕಾಲೇಜು ಎಷ್ಟು ದೂರದಲ್ಲಿದೆ, ಅಲ್ಲಿಗೆ ಯಾವ ಸಾರಿಗೆ ವಿಧಾನ ಲಭ್ಯವಿದೆ, ವಿದ್ಯಾರ್ಥಿನಿಲಯ ಸೌಲಭ್ಯಗಳು ಇವೆಯೇ ಮತ್ತು ಕಾಲೇಜಿನ ಪರಿಸರ ಹೇಗಿದೆ ಇವೇ ಮೊದಲಾದ ವಿಷಯಗಳು ಸಹ, ಅವರು ತಮ್ಮ ಇಚ್ಛೆಗಳ ಆದ್ಯತೆಯನ್ನು ನೀಡುವ ವಿಷಯದಲ್ಲಿ ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತದೆ.

**ಗಮನಿಸಿ:** ಅಭ್ಯರ್ಥಿಗಳು ಇಚ್ಛೆಗಳನ್ನು ಅರಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ, ಮನೆಯಲ್ಲಿ ಪೂರ್ವಾಭ್ಯಾಸ ಮಾಡದೆ ಅಂತರ್ಜಾಲದಲ್ಲಿ ಆನ್‌ಲೈನ್ ಆಯ್ಕೆ ನಮೂನೆಯಲ್ಲಿ ನೇರವಾಗಿ ತಮ್ಮ ಇಚ್ಛೆಗಳನ್ನು ನಮೂದಿಸಬಾರದೆಂದು ಸಲಹೆ ನೀಡಲಾಗಿದೆ. ಏಕೆಂದರೆ ಇದರಿಂದ ಲೋಪಗಳನ್ನು ಎಸಗುವುದಕ್ಕೆ, ತಪ್ಪು ನಮೂದು / ಗಳನ್ನು / ತಪ್ಪು ಕ್ರಮವನ್ನು ಕೊಡುವುದಕ್ಕೆ ಅಸ್ಪದವಾಗಬಹುದು ಕೊನೆ ಕ್ಷಣದಲ್ಲಿ ಉಂಟಾಗಬಹುದಾದ ದಟ್ಟಣೆಯನ್ನು ತಪ್ಪಿಸುವ ಸಲುವಾಗಿ, ಅಭ್ಯರ್ಥಿಗಳು ಕೊನೆಯ ದಿನದವರೆಗೂ ಕಾಯದೆ ಸಾಕಷ್ಟು ಮೊದಲೇ ತಮ್ಮ ಇಚ್ಛೆಗಳನ್ನು ನಮೂದಿಸುವಂತೆ ಸಲಹೆ ನೀಡಲಾಗಿದೆ ಹಾಗೂ ನೆಟ್‌ವರ್ಕ್ ಸಂಬಂಧಿತ ಯಾವುದೇ ಅಡಚಣೆಗಳು / ಸಮಸ್ಯೆಗಳಿಗೆ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಹೊಣೆಯಾಗುವುದಿಲ್ಲ.

**ಇಚ್ಛೆಗಳನ್ನು ನಮೂದಿಸುವ (Option Entry) ಸಮಯದಲ್ಲಿ ಆದ್ಯತಾ ಕ್ರಮವನ್ನು ಅನುಸರಿಸುವ ಕುರಿತು ಸೂಚನೆ**

ಸೀಟು ಹಂಚಿಕೆ ಮಾಡುವುದಕ್ಕಾಗಿ ತಮಗೆ ಇಷ್ಟವಿರುವ ಕೋರ್ಸು ಕಾಲೇಜುಗಳಿಗೆ ಇಚ್ಛೆಗಳನ್ನು ನಮೂದಿಸುವಾಗ ಅಭ್ಯರ್ಥಿಗಳು ಅತ್ಯಂತ ಎಚ್ಚರಿಕೆಯಿಂದ ನಮೂದಿಸಬೇಕು.

1) ಇದಕ್ಕಾಗಿ ಕಾಲೇಜುಗಳ ಪಟ್ಟಿ ಮತ್ತು ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಸೀಟ್ ಮ್ಯಾಟ್ರಿಕ್ಸ್ ಪಟ್ಟಿಯನ್ನು ಸರಿಯಾಗಿ ಅಭ್ಯಾಸ ಮಾಡಿ ಮೊದಲು ನಿಮಗೆ ಇಚ್ಛೆಯಿರುವ ಕೋರ್ಸು/ ಕಾಲೇಜುಗಳ ಒಂದು ಪಟ್ಟಿಯನ್ನು ಮಾಡಿಕೊಳ್ಳಿ. ನಿಮ್ಮ ತಂದೆ ತಾಯಿ / ಪೋಷಕರು / ಹಿತೈಷಿಗಳೊಡನೆ ಚರ್ಚಿಸಿ ಮನೆಯಲ್ಲಿ ಈ ಪೂರ್ವ ಸಿದ್ದತೆಯನ್ನು ಮಾಡಿಕೊಳ್ಳಿ.
2) ಇಚ್ಛೆಯನ್ನು (Option) ನಮೂದಿಸುವಾಗ ಆದ್ಯತಾ ಕ್ರಮ (prioritization) ಅನುಸರಿಸಿ.
3) ಕಾಲೇಜುಗಳ ಕ್ರಮ ಸಂಖ್ಯೆಯ ಪಟ್ಟಿಯನ್ನು ಕೇವಲ ನಿಮ್ಮ ಮಾಹಿತಿಗಾಗಿ ನೀಡಲಾಗಿದೆಯೇ ಹೊರತು, ಅದನ್ನೇ ನಿಮ್ಮ ಆದ್ಯತಾ ಕ್ರಮವಾಗಿ ನಮೂದಿಸಬಾರದು.
4) ನಿಮಗೆ ಅತ್ಯಂತ ಹೆಚ್ಚು ಇಷ್ಟವಿರುವ ಕೋರ್ಸನ್ನು/ಕಾಲೇಜುಗಳನ್ನು ಮೊದಲ ಆದ್ಯತೆಯ ಕ್ರಮ ಸಂಖ್ಯೆಗಳಲ್ಲಿ ನಮೂದಿಸಿ ಆನಂತರ ಇಷ್ಟವಿರುವ ಇತರ ಕೋರ್ಸುಗಳು/ಕಾಲೇಜುಗಳ ಇಚ್ಛೆಯನ್ನು ನಮೂದಿಸಿ ಹೀಗೆ ಮೊದಲಿನ ಇಚ್ಛೆಗೆ ಶೇ 100ರಷ್ಟು ಆದ್ಯತೆಯನ್ನು ಪರಿಗಣಿಸಿದರೆ, ನಂತರದ ಆದ್ಯತೆಗಳು ಇಳಿಕೆ/ಅವರೋಹಣ (descending) ಕ್ರಮದಲ್ಲಿ ಇರಬೇಕು. ಪ್ರತಿ ಸುತ್ತಿನ ಹಂಚಿಕೆ ನಂತರ ಯಾವುದಾದರೂ ಹೊಸ ಕಾಲೇಜುಗಳು/ಕೋರ್ಸುಗಳು ಸೇರ್ಪಡೆಯಾದರೆ ಈಗಾಗಲೇ ನೀವು ನಮೂದಿಸಿರುವ ಆದ್ಯತೆಗಳನ್ನು ಬದಲಾವಣೆ ಮಾಡಲು ಅಥವಾ ಹೊಸದಾಗಿ ಸೇರಿಸಲು ಅವಕಾಶವಿರುತ್ತದೆ.

ಉದಾ: P,Q,R,S,X,Y,Z ಕಾಲೇಜುಗಳಿವೆ ಎಂದು ಭಾವಿಸೋಣ, ಈ ಏಳು ಕಾಲೇಜುಗಳಲ್ಲಿ ತಮಗೆ ಇಷ್ಟವಿರುವ ಆದ್ಯತೆಯಲ್ಲಿ ಆಯ್ಕೆಯನ್ನು ನಮೂದಿಸಬಹುದು.

ಅಂದರೆ X ಕಾಲೇಜು ತಮಗೆ ಇಷ್ಟವಿದ್ದರೆ ಮೊದಲ ಇಚ್ಛೆಯಾಗಿ Y ಕಾಲೇಜು ತಮಗೆ ಇಷ್ಟವಿದ್ದರೆ ಎರಡನೇ ಇಚ್ಛೆಯಾಗಿ Z ಕಾಲೇಜು ತಮಗೆ ಇಷ್ಟವಿದ್ದರೆ ಮೂರನೆ ಇಚ್ಛೆಯಾಗಿ, ನಾಲ್ಕನೇ ಇಚ್ಛೆಯಾಗಿ P ಹೀಗೆ ಅಭ್ಯರ್ಥಿಗಳು ತಮಗೆ ಇಷ್ಟವಿರುವ ಕಾಲೇಜುಗಳಿಗೆ ತಮ್ಮ ಇಚ್ಛೆಗಳನ್ನು ನಮೂದಿಸುತ್ತಾ ಹೋಗಬಹುದು. ಕಾಲೇಜು ಮಾಹಿತಿಯ ವಿವರಗಳಿಗೆ ಅಂದರೆ, ಕಾಲೇಜು ಸಂಕೇತ ಮತ್ತು ಕೋರ್ಸುಗಳ ಸಂಕೇತಗಳನ್ನು ಕುರಿತ ವಿವರಗಳನ್ನು ನೀಡಲಾಗಿದೆ. ಇಚ್ಛೆ ನಮೂದಿಸುವುದಕ್ಕಾಗಿ ಇರುವ ನಮೂನೆಯಲ್ಲಿ ನೀವು ಆದ್ಯತಾ ಸಂಖ್ಯೆಗಳನ್ನು ನಮೂದಿಸುವುದರ ಅರ್ಥ, ನೀವು ನಿರ್ದಿಷ್ಟವಾಗಿ ಆ ಕಾಲೇಜಿಗೆ ಹಾಗೂ ಆ ಕೋರ್ಸಿಗೆ ಸೇರಲು ಆಸಕ್ತಿ ಹೊಂದಿರುತ್ತೀರಿ ಎಂದು ಆಗಿರುತ್ತದೆ.

**ಅಣಕು ಸೀಟು ಹಂಚಿಕೆ (MOCK ALLOTMENT) ಕುರಿತ ಸೂಚನೆ**

ಇಚ್ಛೆಗಳನ್ನು ನಮೂದಿಸುವುದು ಮುಗಿದ ನಂತರ ಅಭ್ಯರ್ಥಿಗಳು ನಮೂದಿಸಿರುವ ಇಚ್ಛೆಗಳ ಆಧಾರದ ಮೇಲೆ ಮತ್ತು ಅವರು ಗಳಿಸಿರುವ ಮೆರಿಟ್ ಹಾಗೂ ರೋಸ್ಟರ್ ಪದ್ದತಿಗೆ ಅನುಸಾರವಾಗಿ ಒಂದು ಅಣಕು ಸೀಟು ಹಂಚಿಕೆ ಪ್ರಕ್ರಿಯೆಯನ್ನು ಈ ಮಾಹಿತಿ ಪುಸ್ತಕದಲ್ಲಿ ವಿವರಿಸಿರುವ ಪ್ರಕ್ರಿಯೆಗಳಿಗೆ ಅನುಸಾರವಾಗಿ ನಡೆಸಲಾಗುವುದು. ಇದು ಕೇವಲ ಒಂದು ಸಾಂಕೇತಿಕ ಸ್ವರೂಪದ ಸೀಟು ಹಂಚಿಕೆ ಪ್ರಕ್ರಿಯೆ ಮಾತ್ರವಾಗಿರುತ್ತದೆ. ಆದ್ದರಿಂದ, ಅಣಕು ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಪಡೆದ ಸೀಟೇ ಸೀಟು ಹಂಚಿಕೆಯ ವಾಸ್ತವಿಕ ಪಕ್ರಿಯೆಯಲ್ಲಿ ಸಿಗಬಹುದು ಅಥವಾ ಸಿಗದಿರಬಹುದು ಆದರೆ, ಈ ಅಣಕು ಸೀಟು ಹಂಚಿಕೆ ಪ್ರಕ್ರಿಯೆಯು, ಅಭ್ಯರ್ಥಿಗಳು ಈಗಾಗಲೇ ನಮೂದಿಸಿರುವ ತಮ್ಮ ಇಚ್ಛೆಗಳನ್ನು (Final Options) ಪರಿಷ್ಕರಿಸಲು ಅಪ್‌ಡೇಟ್ ಮಾಡಲು, ಸೇರಿಸಲು ಅಥವಾ ಕೈಬಿಡಲು ಸಹಾಯ ಮಾಡುತ್ತದೆ.

ಅಭ್ಯರ್ಥಿಗಳು ಯಾವ ಸೀಟು ಹಂಚಿಕೆಯಾಗಿದೆ ಎನ್ನುವುದನ್ನು ಕುರಿತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ಪರಿಶೀಲಿಸಿಕೊಳ್ಳುವುದು ಅಗತ್ಯವಾಗಿರುತ್ತದೆ. ಮತ್ತು ಇದರಿಂದ ಇಚ್ಛೆಪಟ್ಟಿಲ್ಲಿ ತಾವು ಆಯ್ಕೆ ಮಾಡಿಕೊಂಡ ಕೋರ್ಸುಗಳನ್ನು / ಕಾಲೇಜುಗಳನ್ನು ತಮ್ಮ ಆದ್ಯತೆಗೆ ಅನುಸಾರವಾಗಿ ಬದಲಿಸುವ, ಹೊಸ ಕ್ರಮದಲ್ಲಿ ನಮೂದಿಸುವ, ಕೈಬಿಡುವ ಹಾಗೂ ಹೊಸದಾಗಿ ಸೇರಿಸುವ ಸ್ವಾತಂತ್ರ ಹೊಂದಿರುತ್ತಾರೆ. ಎಲ್ಲಾ ಅರ್ಹ ಅಭ್ಯರ್ಥಿಗಳು ನಿಗದಿಪಡಿಸಿದ ಕೊನೆಯ ದಿನಾಂಕದ ಒಳಗಾಗಿ ತಮ್ಮ ಕೊನೆಯ ಇಚ್ಛೆಗಳನ್ನು (Final Options) ನಮೂದಿಸಬೇಕು. ಇಚ್ಛೆಗಳನ್ನು ನಮೂದಿಸುವುದಕ್ಕಾಗಿ ನಿಗದಿಪಡಿಸಿದ ಕೊನೆಯ ದಿನಾಂಕ ಮತ್ತು ಸಮಯ ಮುಗಿದ ನಂತರ, ಯಾರೇ ವಿದ್ಯಾರ್ಥಿಗಳು ತಮ್ಮ ಇಚ್ಛೆಗಳನ್ನು ಬದಲಾಯಿಸಲು ಸಾಧ್ಯವಿರುವುದಿಲ್ಲ.

ಅಲ್ಲದೆ ಅಣಕು ಹಂಚಿಕೆ ಪ್ರಕ್ರಿಯೆ ಮುಗಿದ ನಂತರ ಸಹ ಅಭ್ಯರ್ಥಿಗಳು ತಮ್ಮ ಇಚ್ಛೆಗಳನ್ನು ಬದಲಾಯಿಸದೆ ಇದ್ದರೂ ಕೂಡ ಅಂಥ ಅಭ್ಯರ್ಥಿಗೆ ಅದೇ ಸೀಟು ಸಿಕ್ಕುವುದಿಲ್ಲ. ಏಕೆಂದರೆ, ಬೇರೆ ಅಭ್ಯರ್ಥಿಗಳು ಈ ಮೊದಲು ನಮೂದಿಸಿದ ತಮ್ಮ ಇಚ್ಛೆಗಳನ್ನು ಬದಲಾಯಿಸಬಹುದಾಗಿರುತ್ತದೆ.

ಅಣಕು ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಯಾವುದೇ ಸೀಟು ಹಂಚಿಕೆಯಾಗಿಲ್ಲದಿರುವ ಅಭ್ಯರ್ಥಿಗಳು ತಾವು ನಮೂದಿಸಿರುವ ಇಚ್ಛೆಗಳನ್ನು ಮತ್ತೊಮ್ಮೆ ಪರಿಶೀಲಿಸಿಕೊಳ್ಳುವಂತೆ ಮತ್ತು ಅವರು ತಮಗೆ ಆಸಕ್ತಿ ಇರುವ ಇಚ್ಛೆಗಳನ್ನು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ನಮೂದಿಸುವಂತೆ ಸಲಹೆ ನೀಡಲಾಗಿದೆ.

ಇದು ಕೇವಲ ಸಾಂಕೇತಿಕ ಸ್ವರೂಪದ ಸೀಟು ಹಂಚಿಕೆ ಕ್ರಮವಾಗಿರುತ್ತದೆ ಆದ್ದರಿಂದ ಅಭ್ಯರ್ಥಿಗಳು ಈ ಹಂಚಿಕೆ ಆಧರಿಸಿ ಯಾವುದೇ ಕಾಲೇಜಿಗೆ ದಾಖಲಾಗಲು ಆಗುವುದಿಲ್ಲ. ಆದ್ದರಿಂದ ಅವರು ಸೀಟು ಹಂಚಿಕೆಯ ಅಂತಿಮ (ನಿಜವಾದ) ಫಲಿತಾಂಶ ಬರುವವರೆಗೆ ಕಾಯಬೇಕಿರುತ್ತದೆ ಆದ್ದರಿಂದ, ಎಲ್ಲ ಅಭ್ಯರ್ಥಿಗಳು / ಸೀಟು ಹಂಚಿಕೆಯ ಅಂತಿಮ ಪ್ರಕ್ರಿಯೆಗೆ ಇಚ್ಛೆಗಳನ್ನು ನಮೂದಿಸುವುದಕ್ಕಾಗಿ ನಿಗದಿಪಡಿಸಿರುವ ಕೊನೆಯ ದಿನಾಂಕ ಮತ್ತು ಸಮಯದವರೆಗೆ ತಮ್ಮ ಇಚ್ಛೆಗಳನ್ನು ಅಪ್‌ಡೇಟ್ ಮಾಡಿಕೊಳ್ಳವುದಕ್ಕಾಗಿ / ಸೇರಿಸುವುದಕ್ಕಾಗಿ/ತೆಗೆದು ಹಾಕುವುದಕ್ಕೆ /ಹೊಸ ಇಚ್ಛೆಗಳನ್ನು ನೀಡುವುದಕ್ಕಾಗಿ ತಮ್ಮ ಲಾಗ್ ಇನ್ ಅಕೌಂಟ್‌ಗಳನ್ನು ಬಳಸುವುದನ್ನು ಮುಂದುವರೆಸಬಹುದು.

**ನಾವು ಅಣಕು ಹಂಚಿಕೆಯನ್ನು ಏಕೆ ಮಾಡಬೇಕು?**

ಅಣಕು ಸೀಟು ಹಂಚಿಕೆಯ ಆಧಾರದ ಮೇಲೆ, ಒಬ್ಬ ಅಭ್ಯರ್ಥಿಯು ತಾನು ನೀಡಿರುವ ಇಚ್ಛೆಗಳ ಆದ್ಯತೆಗೆ ಅನುಸಾರವಾಗಿ ಕಾಲೇಜು/ಕೋರ್ಸು/ಸ್ಟ್ರೀಮ್‌ನ ಸಾಂಕೇತಿಕ ಹಂಚಿಕೆಯನ್ನು ಪಡೆಯುತ್ತಾನೆ / ಳೆ. ಇದರಿಂದ ಆ ಅಭ್ಯರ್ಥಿಗೆ ತಾನು ಈಗಾಗಲೇ ನಮೂದಿಸಿರುವ ಇಚ್ಛೆಗಳನ್ನು ಬದಲಾಯಿಸಿಕೊಳ್ಳುವುದಕ್ಕೆ ಅಥವಾ ಉಳಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಒಂದು ಸ್ಪಷ್ಟವಾದ ಚಿತ್ರಣ ಸಿಗುತ್ತದೆ ಹಾಗೆಯೇ ಒಬ್ಬ ಅಭ್ಯರ್ಥಿ, ತಾನು ಅರ್ಹನಾ/ಳಾಗಿರುವ ಯಾವುದೇ ಸೀಟಿಗೆ ಇಚ್ಛೆ ನಮೂದಿಸದೆ ಇರುವ ಕಾರಣದಿಂದ ಆ ಸೀಟು ಹೇಗೆ ಅವನಿಗಿಂತ/ಅವಳಿಗಿಂತ ಕಡಿಮೆ ರ‍್ಯಾಂಕ್ ಪಡೆದಿರುವ ಬೇರೊಬ್ಬ ಅಭ್ಯರ್ಥಿಗೆ ಹಂಚಿಕೆಯಾಗುತ್ತದೆ, ಎನ್ನುವ ವಿಷಯವನ್ನು ಸಹ ತಿಳಿದುಕೊಳ್ಳಬಹುದು ಆದ್ದರಿಂದ ಇಚ್ಛೆಗಳ ಆದ್ಯತೆಯನ್ನು ಬದಲಾಯಿಸುವುದಕ್ಕೆ ಅಥವಾ ತೆಗೆದು ಹಾಕುವುದಕ್ಕೆ ಅಥವಾ ಸೇರಿಸುವುದಕ್ಕೆ ಅಥವಾ ಇಚ್ಛೆಗಳನ್ನು ಹೊಸ ಆದ್ಯತಾ ಕ್ರಮದಲ್ಲಿ ನಮೂದಿಸುವುದಕ್ಕೆ ಸಂಬಂಧಿಸಿದಂತೆ ಅವರಿಗೆ ಮತ್ತೊಂದು ಅವಕಾಶ ನೀಡಿದಂತಾಗುವುದು.

ಅಣಕು ಸೀಟು ಹಂಚಿಕೆಯ ನಂತರ ಅಭ್ಯರ್ಥಿಗಳು ತಮ್ಮ ಇಚ್ಛೆಗಳನ್ನು ಬದಲಾಯಿಸುವ ಕಾರಣದಿಂದಲೇ, ಅವರಿಗೆ ಅಣಕು ಸೀಟು ಹಂಚಿಕೆಯಲ್ಲಿ ಹಂಚಿಕೆಯಾಗಿದ್ದ ಸೀಟೇ, ನಿಜವಾದ / ಅಂತಿಮಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಹಂಚಿಕೆಯಾಗದಿರಬಹುದು.

**ಮೊದಲ ಸುತ್ತಿನ ಸೀಟು ಹಂಚಿಕೆ:**

2019ನೇ ಸಾಲಿನಲ್ಲಿ ಸರ್ಕಾರವು ನಿಗದಿ ಪಡಿಸಿರುವ ಸೀಟ್ ಮ್ಯಾಟ್ರಿಕ್ಸ್ ಅನ್ನು ಅಳವಡಿಸಿಕೊಂಡು, ಅಭ್ಯರ್ಥಿಗಳ ಮೆರಿಟ್, ಮಿಸಲಾತಿ ಮತ್ತು ಅಭ್ಯರ್ಥಿಗಳು ದಾಖಲಿಸಿರುವ ಆಪ್ಷನ್ ಅನ್ನು ಆಧರಿಸಿ ಸೀಟು ಹಂಚಿಕೆ ಮಾಡಿ ಫಲಿತಾಂಶವನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು.

ಸೀಟು ಹಂಚಿಕೆಯ ಫಲಿತಾಂಶವನ್ನು ಅಭ್ಯರ್ಥಿಗಳು ಕೆಇಎ ವೆಬ್‌ಸೈಟ್‌ನಲ್ಲಿ ಪರಿಶೀಲಿಸಿದ ನಂತರ ನಿಗದಿಪಡಿಸಿರುವ ನಾಲ್ಕು CHOICE ಗಳಲ್ಲಿ ಯಾವುದಾದರೂ ಒಂದು CHOICE ನ್ನು ಆಯ್ಕೆ ಮಾಡುವ ಮೊದಲು ಈ ಕೆಳಗಿನ ಅಂಶಗಳನ್ನು ಗಮನಿಸಲು ಸೂಚಿಸಿದೆ.

ಅಭ್ಯರ್ಥಿಗಳು ಮುಂದಿನ ಸುತ್ತಗಳಲ್ಲಿ ಭಾಗವಹಿಸಲು ನಿಗದಿಪಡಿಸಿರುವ ಅರ್ಹತೆ ಮತ್ತು ಮುಂದಿನ ಸುತ್ತುಗಳಲ್ಲಿ ಬರಬಹುದಾದ ಸೀಟುಗಳನ್ನು ಗಮನದಲ್ಲಿಟ್ಟುಕೊಂಡು ಪೋಷಕರ ಜೋತೆ ಚರ್ಚಿಸಿ ಸೂಕ್ತವಾದ CHOICE ಅನ್ನು ಆಯ್ಕೆ ಮಾಡಿಕೊಳ್ಳಲು ಸೂಚಿಸಿದೆ.

**ಅಭ್ಯರ್ಥಿಗಳಿಗೆ ಸೂಚನೆ**

ಅಭ್ಯರ್ಥಿಗಳು CHOICE ಗಳನ್ನು ಆಯ್ಕೆ ಮಾಡಿಕೊಳ್ಳಲು ಹಾಗೂ ಚಲನ್ ಅನ್ನು ಡೌನ್ ಲೋಡ್ ಮಾಡಿಕೊಳ್ಳಲು "ಪ್ರಕ್ರಿಯೆ ಶುಲ್ಕ ಪಾವತಿ ಮಾಡಲು ಮತ್ತು ಪ್ರವೇಶ ಆದೇಶ ಪತ್ರವನ್ನು ಡೌನ್ ಲೋಡ್ ಮಾಡಿಕೊಳ್ಳಲು" ಯಾವುದೇ ಸಹಾಯಕ ಕೇಂದ್ರಗಳಿಗೆ ಭೇಟಿ ನೀಡುವ ಅವಶ್ಯಕತೆ ಇರುವುದಿಲ್ಲ. ಈ ಮೇಲಿನ ಎಲ್ಲಾ ಚಟುವಟಿಕೆಗಳಿಗೆ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ಗೆ ಭೇಟಿ ನೀಡಲು ಕೋರಿದೆ

**ಮೊದಲ ಸುತ್ತು ಸೀಟು ಹಂಚಿಕೆ ಸೂಚನೆಗಳು**

ಸೀಟು ಹಂಚಿಕೆಯ ಫಲಿತಾಂಶವನ್ನು ಅಭ್ಯರ್ಥಿಗಳು ಕೆಇಎ ವೆಬ್‌ಸೈಟ್‌ನಲ್ಲಿ ಪರಿಶೀಲಿಸಿದ ನಂತರ ಅಭ್ಯರ್ಥಿಗಳಿಗೆ ಈ ಕೆಳಗೆ ವಿವರಿಸಿರುವಂತೆ ನಿರ್ಣಯಗಳನ್ನು ತೆಗೆದುಕೊಳ್ಳಬಹುದಾಗಿರುತ್ತದೆ.

ಅ) ಸೀಟು ಹಂಚಿಕೆ ಫಲಿತಾಂಶ ಪ್ರಕಟವಾದ ನಂತರ ಅಭ್ಯರ್ಥಿಯು ತಮಗೆ ದೊರಕಿರುವ ಸೀಟು ತೃಪ್ತಿಕರವಾಗಿದೆ ಎಂದು ಖಚಿತಪಡಿಸಿಕೊಳ್ಳಬೇಕು. ತೃಪ್ತಿಕರವಾಗಿದ್ದಲ್ಲಿ, CHOICE - 1 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು (ಮುಂದಿನ ಸುತ್ತಿನಲ್ಲಿ ಭಾಗವಹಿಸಲು ಅರ್ಹತೆ ಇರುವುದಿಲ್ಲ)

ಆ) ಅಭ್ಯರ್ಥಿಯು ತಮಗೆ ದೊರಕಿರುವ ಸೀಟು ತೃಪ್ತಿಕರವಾಗಿದೆ ಆದರೆ ನನಗೆ ಇನ್ನೂ ಉತ್ತಮ ಸೀಟು ಬೇಕಾಗಿದೆ, ಆದ್ದರಿಂದ ನಾನು ಮುಂದಿನ ಸುತ್ತಿನಲ್ಲಿ ಭಾಗವಹಿಸುತ್ತೇನೆ ಎಂದು ನಿರ್ಣಯಿಸಿದರೆ CHOICE – 2 ಅನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.

ಇ) ಅಭ್ಯರ್ಥಿಯು ತಮಗೆ ಮೊದಲ ಸುತ್ತಿನಲ್ಲಿ ದೊರಕಿರುವ ಸೀಟು ತೃಪ್ತಿಕರವಾಗಿಲ್ಲ, ಆದ್ದರಿಂದ ನಾನು ಮುಂದಿನ ಸುತ್ತಿನಲ್ಲಿ ಭಾಗವಹಿಸುತ್ತೇನೆ ಎಂದು ನಿರ್ಣಯಿಸಿದರೆ CHOICE – 3 ಅನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.

ಈ) ಅಭ್ಯರ್ಥಿಯು ತಮಗೆ ಮೊದಲ ಸುತ್ತಿನಲ್ಲಿ ದೊರಕಿರುವ ಸೀಟು ತೃಪ್ತಿಕರವಾಗಿಲ್ಲ, ನನಗೆ ದೊರಕಿರುವ ಸೀಟು ಬೇಡ ಹಾಗೂ ನನಗೆ ಮುಂದಿನ ಸುತ್ತಿನಲ್ಲೂ ಸಹ ಯಾವುದೂ ಸೀಟು ತೆಗೆದುಕೊಳ್ಳಲು ಇಷ್ಟವಿಲ್ಲ. ನಾನು ಬೇರೆ ಸಂಸ್ಥೆಯಿಂದ ಸೀಟು ತೆಗೆದುಕೊಳ್ಳುತ್ತೇನೆ ಎಂದು ನಿರ್ಣಯಿಸಿದರೆ CHOICE – 4 ಅನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.

**CHOICE – 1 ಅನ್ನು ಆಯ್ಕೆ ಮಾಡುವ ಅಭ್ಯರ್ಥಿಗಳು ಈ ಕೆಳಗಿನ ನಿರ್ದೇಶನಗಳನ್ನು ಪಾಲಿಸಬೇಕು.**

- ಸೀಟು ಹಂಚಿಕೆ ಫಲಿತಾಂಶ ಪ್ರಕಟವಾದ ನಂತರ ಅಭ್ಯರ್ಥಿಯು ತಮಗೆ ದೊರಕಿರುವ ಸೀಟು ತೃಪ್ತಿಕರವಾಗಿದೆ ಎಂದು ಖಚಿತಪಡಿಸಿಕೊಳ್ಳಬೇಕು.
- ತೃಪ್ತಿಕರವಾಗಿದ್ದಲ್ಲಿ CHOICE – 1 ಅನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.
- ನಂತರ ನಿಗದಿತ ಶುಲ್ಕವನ್ನು ಪಾವತಿಸಬೇಕು
- ಶುಲ್ಕ ಪಾವತಿಯಾದ ನಂತರ ಅಭ್ಯರ್ಥಿಗಳು ಪ್ರವೇಶ ಪತ್ರವನ್ನು ಡೌನ್ ಮಾಡಿಕೊಳ್ಳಬಹುದಾಗಿದೆ.
- ನಂತರ ಪ್ರಾಧಿಕಾರದ ವೆಬ್‌ಸೈಟ್ ನಿಂದ ಪ್ರವೇಶ ಪತ್ರವನ್ನು ಪಡೆದು, ನಿಗದಿ ಪಡಿಸಿದ ಜಾಗದಲ್ಲಿ ಅಭ್ಯರ್ಥಿಯು ಸಹಿಯನ್ನು ಮಾಡಬೇಕು ಹಾಗೂ ಎಲ್ಲಾ ಮೂಲ ದಾಖಲೆಗಳೊಂದಿಗೆ ಪ್ರವೇಶ ಪತ್ರದಲ್ಲಿ ಮುದ್ರಿಸುವ ಕೊನೆಯ ದಿನಾಂಕದ ಒಳಗಾಗಿ ಸಂಬಂಧಿಸಿದ ಕಾಲೇಜಿನಲ್ಲಿ ಪ್ರವೇಶ ಪಡೆಯಬೇಕು.
- ಕಾಲೇಜಿನಲ್ಲಿ ಪ್ರವೇಶ ಪಡೆದ ನಂತರ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್ ಸೈಟ್‌ನಲ್ಲಿ ಪ್ರವೇಶ ಪಡೆದ ಬಗ್ಗೆ ದಾಖಲಿಸಬೇಕು

**CHOICE – 2 ಅನ್ನು ಆಯ್ಕೆ ಮಾಡುವ ಅಭ್ಯರ್ಥಿಗಳು ಈ ಕೆಳಗಿನ ನಿರ್ದೇಶನಗಳನ್ನು ಪಾಲಿಸಬೇಕು.**

- CHOICE – 2 ಅನ್ನು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳು ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಕಡ್ಡಾಯವಾಗಿ ಪ್ರಕ್ರಿಯೆ ಶುಲ್ಕವನ್ನು ಪಾವತಿಸಬೇಕು, ಆದರೆ ಕಾಲೇಜಿನಲ್ಲಿ ಪ್ರವೇಶ ಪಡೆಯಬಾರದು.
- CHOICE – 2 ಅಭ್ಯರ್ಥಿಗಳು ಮೊದಲನೇ ಸುತ್ತಿನಲ್ಲಿ ಆಯ್ಕೆಯಾದ ಸೀಟನ್ನು ತಮ್ಮೊಡನೆ ಉಳಿಸಿಕೊಂಡು ಎರಡನೇ ಸುತ್ತಿನಲ್ಲಿ ಭಾಗವಹಿಸುತ್ತಾರೆ. ಅಂತಹ ಅಭ್ಯರ್ಥಿಗಳಿಗೆ ಯಾವುದೇ ಸೀಟು ಅಂದರೆ Higher Order

Options ಹಂಚಿಕೆಯಾದಲ್ಲಿ ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟು ರದ್ದು ಗೊಳ್ಳುತ್ತದೆ. ಎರಡನೇ ಸುತ್ತಿನಲ್ಲಿ ಯಾವುದೇ ಸೀಟು ಹಂಚಿಕೆಯಾಗದಿದ್ದಲ್ಲಿ ಮೊದಲ ಸುತ್ತಿನಲ್ಲಿ ಪಡೆದ ಸೀಟು ಅವರ ಬಳಿಯೇ ಇರುತ್ತದೆ.

- Higher Order Options ಅಂದರೆ, ಒಬ್ಬ ಅಭ್ಯರ್ಥಿಯು 180 ಆಪ್ಷನ್‌ಗಳನ್ನು ದಾಖಲಿಸಿದ್ದಲ್ಲಿ ಇವುಗಳ ಪೈಕಿ ಮೊದಲನೆ ಸುತ್ತಿನಲ್ಲಿ ಅಭ್ಯರ್ಥಿಗೆ 123 ನೇ ಕ್ರಮಾಂಕದ ಆಪ್ಷನ್‌ನ ಸೀಟು ದೊರಕಿದೆ ಎಂದು ಭಾವಿಸಿದಲ್ಲಿ, 1 ರಿಂದ 122 ನೇ ಆಪ್ಷನ್‌ಗಳ ಸೀಟುಗಳು Higher Order Options ಆಗುತ್ತದೆ, ಎರಡನೇ ಸುತ್ತಿನಲ್ಲಿ ಈ ಮೇಲಿನ ಯಾವುದೇ ಆಪ್ಷನ್‌ಗಳಿಗೆ ಮೆರಿಟ್ ಆಧಾರದ ಮೇಲೆ ಸೀಟು ಹಂಚಿಕೆಯಾದಲ್ಲಿ ಮೊದಲನೆ ಸುತ್ತಿನಲ್ಲಿ ಹಂಚಿಕೆಯಾದ ಸೀಟು ರದ್ದುಗೊಳ್ಳುತ್ತದೆ.
- Higher Order Options ಗಳಲ್ಲಿ ಯಾವುದೇ ಸೀಟು ಹಂಚಿಕೆಯಾಗದಿದ್ದಲ್ಲಿ ಮೊದಲನೇ ಸುತ್ತಿನಲ್ಲಿ ಆಯ್ಕೆಯಾದ ಸೀಟು ಅಭ್ಯರ್ಥಿಯ ಹೆಸರಿನಲ್ಲಿರುತ್ತದೆ.

**CHOICE – 3 ಅನ್ನು ಆಯ್ಕೆ ಮಾಡುವ ಅಭ್ಯರ್ಥಿಗಳು ಈ ಕೆಳಗಿನ ನಿರ್ದೇಶನಗಳನ್ನು ಪಾಲಿಸಬೇಕು**

- CHOICE – 3 ಅನ್ನು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳು ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಶುಲ್ಕವನ್ನು ಪಾವತಿಸುವ ಅಗತ್ಯವಿರುವುದಿಲ್ಲ.
- CHOICE – 3 ಅಭ್ಯರ್ಥಿಗಳು ಮೊದಲ ಸುತ್ತಿನಲ್ಲಿ ಆಯ್ಕೆಯಾದ ಸೀಟು ಇಷ್ಟವಿರುವುದಿಲ್ಲ.
- CHOICE – 3 ಅಭ್ಯರ್ಥಿಗಳು ಮೊದಲನೇ ಸುತ್ತಿನಲ್ಲಿ ಆಯ್ಕೆಯಾದ ಸೀಟನ್ನು ರದ್ದುಪಡಿಸಿಕೊಂಡು (ತಮ್ಮೊಡನೆ ಉಳಿಸಿಕೊಳ್ಳದೆ) ಎರಡನೇ ಸುತ್ತಿನಲ್ಲಿ ಭಾಗವಹಿಸುತ್ತಾರೆ. ಅಂತಹ ಅಭ್ಯರ್ಥಿಗಳಿಗೆ ಯಾವುದೇ ಸೀಟು ಹಂಚಿಕೆಯಾದಲ್ಲಿ ಮಾತ್ರ ಅವರು ಸೀಟನ್ನು ಆಯ್ಕೆ ಮಾಡಿಕೊಳ್ಳಬೇಕು ಅಂದರೆ, ಒಬ್ಬ ಅಭ್ಯರ್ಥಿಯು 180 ಆಪ್ಷನ್‌ಗಳನ್ನು ದಾಖಲಿಸಿದ್ದಲ್ಲಿ ಇವುಗಳ ಪೈಕಿ ಮೊದಲನೇ ಸುತ್ತಿನಲ್ಲಿ ಅಭ್ಯರ್ಥಿಗೆ 123 ನೇ ಕ್ರಮಾಂಕದ ಆಪ್ಷನ್ ನ ಸೀಟು ದೊರಕಿದೆ ಎಂದು ಭಾವಿಸಿದಲ್ಲಿ 123ನೇ ಆಪ್ಷನ್/ಇಚ್ಚೆಯನ್ನು ಬಿಟ್ಟು ಉಳಿದ ಎಲ್ಲ ಇಚ್ಚೆಗಳನ್ನು ತೋರಿಸಲಾಗುವುದು ಅಭ್ಯರ್ಥಿಗಳು ಆಪ್ಷನ್‌ಗಳನ್ನು ಮಾರ್ಪಡಿಸಿಕೊಳ್ಳಬಹುದು.

**CHOICE – 4 ಅನ್ನು ಆಯ್ಕೆ ಮಾಡುವ ಅಭ್ಯರ್ಥಿಗಳು**

ಅಭ್ಯರ್ಥಿಯು ತಮಗೆ ಮೊದಲ ಸುತ್ತಿನಲ್ಲಿ ದೊರಕಿರುವ ಸೀಟು ತೃಪ್ತಿಕರವಾಗಿಲ್ಲ ನನಗೆ ದೊರಕಿರುವ ಸೀಟು ಬೇಡ ಹಾಗೂ ನನಗೆ ಮುಂದಿನ ಸುತ್ತನಲ್ಲೂ ಸಹ ಯಾವುದೂ ಸೀಟು ತೆಗೆದುಕೊಳ್ಳಲು ಇಷ್ಟವಿಲ್ಲ ಅಥವಾ ನಾನು ಬೇರೆ ಸಂಸ್ಥೆಯಿಂದ ಸೀಟು ತೆಗೆದುಕೊಳ್ಳತ್ತೇನೆ ಎಂದು ನಿರ್ಣಯಿಸಿದರೆ CHOICE – 4 ಅನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು

**ಎರಡನೇ ಸುತ್ತಿನ ಹಂಚಿಕೆ ಅಭ್ಯರ್ಥಿಗಳಿಗೆ ಸೂಚನೆಗಳು**

ಪ್ರಾಧಿಕಾರದ ವೆಬ್‌ಸೈಟ್‌ನ ನಿಗದಿತ ಲಿಂಕ್ ಆಯ್ಕೆ ಮಾಡಿಕೊಂಡು ಅಭ್ಯಥಿಗಳು ಅವರುಗಳ ಮಾಹಿತಿಯನ್ನು ದಾಖಲಿಸಿದಲ್ಲಿ ಮೊದಲ ಸುತ್ತಿನಲ್ಲಿ ದಾಖಲಿಸಿದ ಆದ್ಯತೆಗಳನ್ನು ತೋರಿಸಲಾಗುವುದು ಮೊದಲ ಸುತ್ತಿನಲ್ಲಿ ದಾಖಲಿಸಿದ ಆದ್ಯತೆಗಳು ಎರಡನೇ ಸುತ್ತಿಗೂ ಸಹ ಅನ್ವಯಿಸುತ್ತದೆ(ಅಂದರೆ ಮೇಲ್ಪಟ್ಟ ಆದ್ಯತೆಗಳು ಮಾತ್ರ). **ಅಭ್ಯರ್ಥಿಗಳು ಹೊಸದಾಗಿ ಆದ್ಯತೆಗಳನ್ನು ದಾಖಲಿಸಲು ಅವಕಾಶವಿರುವುದಿಲ್ಲ,** ಮೊದಲ ಸುತ್ತಿಗೂ ಮುಂಚೆ ದಾಖಲಿಸಿದ ಆದ್ಯತೆಗಳನ್ನು ಅಂತಿಮ ಎಂದು ಪರಿಗಣಿಸಲಾಗುವುದು.

ಅಭ್ಯರ್ಥಿಗಳು ಮೇಲ್ಪಟ್ಟ ಆದ್ಯತೆಗಳನ್ನು (Higher order Options above the allotted option) ಬದಲಾಯಿಸಬಹುದು ಅಥವಾ ತೆಗೆದುಹಾಕಬಹುದು ಯಾವುದಾದರೂ ಹೊಸದಾಗಿ ಕಾಲೇಜುಗಳು ಅಥವಾ ಕೋರ್ಸುಗಳು ಸೇರ್ಪಡೆಯಾದಲ್ಲಿ ಮಾತ್ರ ಅಭ್ಯರ್ಥಿಗಳು ಹೊಸದಾಗಿ ಸೇರ್ಪಡೆಯಾದ ಕಾಲೇಜು / ಕೋರ್ಸುಗಳ ಆದ್ಯತೆಗಳನ್ನು ದಾಖಲಿಸಬಹುದಾಗಿರುತ್ತದೆ.

ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಭಾಗವಹಿಸಲು ಇಚ್ಛೆಸಿರುತ್ತಾರೆ ಎಂದರೆ ಮೊದಲಸುತ್ತಿನಲ್ಲಿ ಹಂಚಿಕೆಯಾದ ಸೀಟಿಗಿಂತ ಉತ್ತಮವಾದ ಸೀಟನ್ನು ಆಯ್ಕೆ ಮಾಡಿಕೊಳ್ಳಲು ಭಾಗವಹಿಸುತ್ತಾರೆ. ಈ ಸುತ್ತಿನಲ್ಲಿ ಅಭ್ಯರ್ಥಿಗಳಿಗೆ ಯಾವುದೇ ಮೇಲ್ಪಟ್ಟ ಆದ್ಯತೆಗಳ ಸೀಟು (Higher order Options above the allotted option) ದೊರಕದಿದ್ದಲ್ಲಿ ಮೊದಲ ಸುತ್ತಿನಲ್ಲಿ ಯಾವುದಾದರೂ ಸೀಟು ಹಂಚಿಕೆಯಾಗಿದ್ದಲ್ಲಿ ಅದೇ ಸೀಟು ಉಳಿಯುತ್ತದೆ. ಅಭ್ಯರ್ಥಿಗಳು ದಾಖಲಿಸಿರುವ ಆದ್ಯತೆಗಳು ಈ ಸುತ್ತಿಗೂ ಸಹ ಅನ್ವಯಿಸುತ್ತದೆ.

1. ಪ್ರತಿ ಬಾರಿಯೂ ಗಣಕಯಂತ್ರವು ಮೇಲಿನ ಆದ್ಯತೆಗಳನ್ನು ಮಾತ್ರ ಆಯ್ಕೆಗೆ ಪರಿಗಣಿಸುವುದರಿಂದ ಅಭ್ಯರ್ಥಿಗೆ ಉತ್ತಮವಾದ ಸೀಟು ದೊರೆಯುವ ಸಾಧ್ಯತೆಗಳಿರುತ್ತದೆ ಅಂದರೆ ಗಣಕ ಯಂತ್ರವು ಆದ್ಯತೆಗಳ ಹುಡುಕುವಿಕೆಯನ್ನು ಒಂದರಿಂದ ಶುರುಮಾಡುತ್ತದೆ.
2. ಮೆರಿಟ್ ಆಧಾರದ ಮೇಲೆ ಹಾಗೂ ಅಭ್ಯರ್ಥಿಗಳು ದಾಖಲಿಸಿದ ಆದ್ಯತೆಗಳ ಮೇರೆಗೆ ಸೀಟನ್ನು ಹಂಚಿಕೆ ಮಾಡಿರುವುದರಿಂದ ಅಭ್ಯರ್ಥಿಗಳು ಸೀಟು ಹಂಚಿಕೆಯಾದ ಮೇಲೆ ತಿರಸ್ಕರಿಸುವಂತಿಲ್ಲ ಮತ್ತು ನಿರ್ಲಕ್ಷತೆಯನ್ನು ತೋರುವಂತಿಲ್ಲ.
3. ಈ ಮೊದಲೇ ಹೇಳಿದಂತೆ ಮೊದಲ ಸುತ್ತಿನಲ್ಲಿ ಹಂಚಿಕೆಯಾದ ಸೀಟು ನಂತರದ ಅಭ್ಯರ್ಥಿಗಳಿಗೆ ಮೇರಿಟ್ ಆಧಾರದ ಮೇಲೆ ಹಂಚಿಕೆಯಾಗುವುದರಿಂದ ಯಾವುದೇ ಕಾರಣಕ್ಕೂ ಮೊದಲ ಸುತ್ತಿನಲ್ಲಿ ಹಂಚಿಕೆಯಾದ ಕಾಲೇಜಿನಲ್ಲಿ ಮುಂದುವರಿಯಲು ಸಾಧ್ಯವಾಗುವುದಿಲ್ಲ ಅಂತಹ ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಹಂಚಿಕೆಯಾಗುವ ಕಾಲೇಜಿನಲ್ಲಿ ಪ್ರವೇಶವನ್ನು ಪಡೆಯಬೇಕು.
4. ಅಭ್ಯರ್ಥಿಗಳು ದಯವಿಟ್ಟು ಗಮನಿಸಿ, ಮೆರಿಟ್ ಆಧಾರದ ಮೇಲೆ ಸೀಟು ಹಂಚಿಕೆಯಾಗುವುದರಿಂದ ಮೊದಲ ಸುತ್ತಿನಲ್ಲಿ ಹಂಚಿಕೆಯಾಗಿದ್ದ ಸೀಟನ್ನು ಹಿಂಪಡೆಯಲಾಗುವುದಿಲ್ಲ.
5. ಸೀಟ್ ಮ್ಯಾಟ್ರಿಕ್ಸ್‌ನಲ್ಲಿ ಸೀಟುಗಳ ಲಭ್ಯತೆ ಇಲ್ಲದಿದ್ದರೂ ಸಹ ಅಭ್ಯರ್ಥಿಗಳು ಆದ್ಯತೆಗಳನ್ನು ಬದಲಾಯಿಸಬಹುದು, ಯಾಕೆಂದರೆ ಸೀಟು ಹಂಚಿಕೆಯ ಕಾರ್ಯದಲ್ಲಿ ಉದ್ಭವಿಸುವ ಸೀಟುಗಳನ್ನೂ ಸಹ ಹಂಚಿಕೆ ಮಾಡಲಾಗುವುದು

ಗಮನಿಸಿ: ಅಭ್ಯರ್ಥಿ ತಮ್ಮ ರ್‍ಯಾಂಕ್ ಸರದಿಯ ನಂತರ ಉದ್ಭವಿಸುವ ಸೀಟುಗಳನ್ನು ಪಡೆಯಲು ಹಕ್ಕನ್ನು ಚಲಾಯಿಸುವಂತಿಲ್ಲ.

ಎರಡನೇ ಸುತ್ತಿನ ಸೀಟು ಹಂಚಿಕೆಯ ನಂತರ ಫಲಿತಾಂಶವನ್ನು ಪ್ರಾಧಿಕಾರದ ವೆಬ್ ಸೈಟ್‌ನಲಿ ಪ್ರಕಟಿಸಲಾಗುವುದು. ಎರಡನೇ ಸುತ್ತಿನ ಸೀಟು ಹಂಚಿಕೆಯು ಕೊನೆಯ ಸುತ್ತಿನ ಸೀಟು ಹಂಚಿಕೆಯಾಗಿರುತ್ತದೆ ಆದ್ದರಿಂದ ಈ ಎರಡನೇ ಸುತ್ತಿನಲ್ಲಿ ಸೀಟು ಹಂಚಿಕೆಯ ನಂತರ ಯಾವುದೇ ಛಾಯ್ಸ್‌ಗಳು ಇರುವುದಿಲ್ಲ. ಅಭ್ಯರ್ಥಿಗಳ ಮೆರಿಟ್ ಮತ್ತು ಇಚ್ಛೆಗಳನ್ನು ಆಧರಿಸಿ ಸೀಟು ಹಂಚಿಕೆ ಮಾಡುವುದರಿಂದ ಸೀಟು ಹಂಚಿಕೆಯ ನಂತರ ಅಭ್ಯರ್ಥಿಗಳು ಕಡ್ಡಾಯವಾಗಿ ಕಾಲೇಜಿನಲ್ಲಿ ಪ್ರವೇಶ ಪಡೆಯಬೇಕು.

ಸಹಿ/-

ನಿರ್ದೇಶಕರು, ವೈದ್ಯಕೀಯ ಶಿಕ್ಷಣ

ದಿನಾಂಕ 25.09.2019

ಸ್ಥಳ:- ಬೆಂಗಳೂರು

2019–20ನೇ ಸಾಲಿನ ಬಿ.ಎಸ್.ಸಿ. ಬಿ.ಪಿ.ಟಿ., ಬಿ.ಪಿ.ಒ ಮತ್ತು ಬಿ.ಎಸ್.ಸಿ ಅಲೈಡ್ ಹೆಲ್ತ್ ಸೈನ್ಸ್ ಕೋರ್ಸುಗಳ ಪ್ರವೇಶಕ್ಕಾಗಿ ಇಚ್ಛೆ / ಆಯ್ಕೆ ದಾಖಲಿಸಲು ವೇಳಾಪಟ್ಟಿ (ಸೀಟು ಹಂಚಿಕೆ – ಮೊದಲನೇ ಸುತ್ತು).

| ಕ್ರ ಸಂ | ವಿವರಗಳು | ದಿನಾಂಕ/ಸಮಯ |
|---|---|---|
| 01. | Display of seat Matrix and Fee Structure<br>ಸೀಟ್ ಮ್ಯಾಟ್ರಿಕ್ಸ್ ಮತ್ತು ಶುಲ್ಕದ ವಿವರಗಳ ಪ್ರಕಟಣೆ | 23.09.2019 |
| 02. | Verification of Original documents. | 24.09.2019 to 26.09.2019 |
| 03. | **Option Entry by eligible candidates (In the order of preference –after one hour of verification of documents)**<br>ಇಚ್ಛೆ/ಆಯ್ಕೆಗಳನ್ನು ದಾಖಲಿಸುವುದು (ಆದ್ಯತಾ ಕ್ರಮದಲ್ಲಿ–ದಾಖಲೆ ಪರಿಶೀಲನೆಯಾದ ಒಂದು ಗಂಟೆಯ ನಂತರ) | **26.09.2019 to 30.09.2019 up to 5.30pm** |
| 04. | **Publication of Mock Allotment Results**<br>ಅಣುಕು ಸೀಟು ಹಂಚಿಕೆಯ ಫಲಿತಾಂಶ | **01.10.2019 after 4.00pm** |
| 05. | **Provision to change options if any by candidates (Add or Delete or Modify or Re-Order or Alter the options)** ಆಯ್ಕೆಗಳನ್ನು ಬದಲಾಯಿಸಲು ಅವಕಾಶ (ಸೇರಿಸಿ /ಅಳಿಸಿ/ಬದಲಾಯಿಸಿ/ಮಾರ್ಪಡಿಸಿ) | **after 6.00 pm on 01-10-2019 to 03-10-2019 up to 4.00 pm.** |
| 06. | **Publication of First round seat allotment result**<br>ಮೊದಲನೆ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆ | **04-10-2019 after 4.00pm** |
| 07. | **Exercise of Choices by the candidates allotted seat in the first round (Select the right choice out of four choices-before selecting any choice understand the implications of each choice)**<br>ಸೀಟು ಹಂಚಿಕೆಯಾದ ಅಭ್ಯರ್ಥಿಗಳು **choice** ಗಳಲ್ಲಿ ಸೂಕ್ತವಾದ **choice** ಅನ್ನು ಆಯ್ಕೆ ಮಾಡುಲು (ನಾಲ್ಕು **choice** ಗಳಲ್ಲಿ ಸೂಕ್ತವಾದ **choice** ಅನ್ನು ಆಯ್ಕೆ ಮಾಡಿ–ಯಾವುದೇ **choice** ಅನ್ನು ಆಯ್ಕೆ ಮಾಡುವ ಮುನ್ನ ಪ್ರತಿ **choice** ನ ಪರಿಣಾಮವನ್ನು ಗಮನಿಸಿ). | **05-10-2019 to 08-10-2019** |
| 08. | **Payment of fees & downloading of Admission orders only by Choice-1 Candiates**<br>**a)** ಶುಲ್ಕ ಪಾವತಿ ಮಾಡುವುದು – **Choice-1 and Choice-2** ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳಿಗೆ ಮಾತ್ರ<br>**b)**ಪ್ರವೇಶ ಪತ್ರ ಡೌನಲೋಡ್ ಮಾಡಿಕೊಳ್ಳುವುದು – **Choice-1** ಅರ್ಭ್ಯಗಳಿಗೆ ಮಾತ್ರ–ಶುಲ್ಕ ಪಾವತಿಯ ನಂತರ | **05-10-2019 to 11-10-2019** |
| 09. | **Last Date for reporting to the allotted colleges by Choice -1 candidates**<br>**Choice-1** ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಕಾಲೇಜಿನಲ್ಲಿ ಪ್ರವೇಶ ಪಡೆಯಲು ಕೊನೆಯ ದಿನಾಂಕ | **14-10-2019 up to 4:00 pm** |

ಈ ಪ್ರವೇಶ ಮೇಲಿನ ದಾಖಲಾತಿ ಪರಿಶೀಲನಾ ವೇಳಾಪಟ್ಟಿ ಮತ್ತು ಇಚ್ಛೆ/ಆಯ್ಕೆ ದಾಖಲಿಸುವ ವೇಳಾಪಟ್ಟಿಯ ಬಗ್ಗೆ ಮಾಹಿತಿಯನ್ನು ಅಭ್ಯರ್ಥಿಗಳಿಗೆ ವೈಯಕ್ತಿಕವಾಗಿ ಕಳುಹಿಲಾಗುವುದಿಲ್ಲ.

ಸಹಿ/–

ದಿನಾಂಕ 25.09.2019 ನಿರ್ದೇಶಕರು, ವೈದ್ಯಕೀಯ ಶಿಕ್ಷಣ

ಸ್ಥಳ:– ಬೆಂಗಳೂರು